# ಮುಕ್ತಾಯಕ್ಕನ ವಚನಗಳಲ್ಲಿ ದೇಹ ಮತ್ತು ಆತ್ಮ ನಿರೂಪಣೆ

**ಉಮೇಶ್ ಎಂ.ಆರ್.**

ಕನ್ನಡ ಸಹಾಯಕ ಪ್ರಾಧ್ಯಾಪಕ, ದಯಾನಂದ ಸಾಗರ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು.

DOI: https://doi.org/10.5281/zenodo.17773509

## ABSTRACT:

ಹನ್ನೆರಡನೆಯ ಶತಮಾನದ ವಚನ ಚಳುವಳಿಯನ್ನು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ಅಭೂತಪೂರ್ವ ಘಟ್ಟ ಎನ್ನಬಹುದು. ಜಡಗೊಂಡ ಸಾಮಾಜಿಕ ವ್ಯವಸ್ಥೆಯನ್ನು ಎಚ್ಚರಗೊಳಿಸುವ, ಮಾನವೀಯ ಮೌಲ್ಯಗಳನ್ನು ಸಮಾಜದಲ್ಲಿ ಬಿತ್ತುವ ಸಾರ್ಥಕ ಕೆಲಸವನ್ನು ವಚನಕಾರರು ಮಾಡಿದರು. ಅವರ ವಚನಗಳು ಹೊಸ ಜಾಗೃತಿ ಹಾಗೂ ಜ್ಞಾನದ ಸಾಧ್ಯತೆಗಳಾಗಿ ಕೆಲಸ ಮಾಡಿದವು. ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿದ್ದ ಮೂಢನಂಬಿಕೆಗಳು, ಕಂದಾಚಾರಗಳು, ಜಾತಿ ಲಿಂಗಾಧಾರಿತ ತಾರತಮ್ಯ ಮುಂತಾವುಗಳನ್ನು ನಿವಾರಿಸಲು ಬಹು ದೊಡ್ಡ ವೈಚಾರಿಕ ಆಂದೋಲನವನ್ನು ವಚನಕಾರರು ಮಾಡಿದರು. ಎಂಟು ನೂರು ವರ್ಷಗಳ ನಂತರವೂ ಕೂಡಾ ವಚನಕಾರರು ಪ್ರತಿಪಾದಿಸಿದ ಜೀವನ ಮೌಲ್ಯಗಳು ಸಮಾಜವನ್ನು ಮುನ್ನಡೆಸುವ ದಾರಿದೀಪಗಳಾಗಿ ಕೆಲಸ ಮಾಡುತ್ತಿವೆ ಎಂದರೆ ವಚನಕಾರರ ವಚನಗಳಲ್ಲಿ ಅಂತರ್ಗತವಾಗಿದ್ದ ತತ್ವ ಹಾಗೂ ಮೌಲ್ಯಗಳ ಗಟ್ಟಿತನವನ್ನು ಅರ್ಥಮಾಡಿಕೊಳ್ಳಬಹುದು.

## KEYWORDS:

ಹೆಣ್ಣು, ದೇಹ, ಆತ್ಮ, ಶಿವಸ್ಮರಣೆ, ವೈಚಾರಿಕತೆ.

ಭಾರತದ ಇತಿಹಾಸವನ್ನು ನೋಡಿದರೆ ಶತಮಾನದಿಂದಲೂ ಸ್ತ್ರೀಯರನ್ನು ಕಡೆಗಣಿಸಲಾಗಿದೆ. ಹೆಣ್ಣನ್ನು ಮುಖ್ಯವಾಗಿ ಹೆಂಡತಿ ಹಾಗೂ ತಾಯಿಯಾಗಿ ಮಾತ್ರ ನೋಡಲಾಗಿದೆ. ಅದರಲ್ಲೂ ಹೆಣ್ಣು ಗಂಡಿನ ಹಾಸಿಗೆಯಲ್ಲಿ ಹೆಂಡತಿಯಾಗಿ ಮಾತ್ರ ಪಾಲ್ಗೊಳ್ಳಬೇಕು. ಅದರ ಜೊತೆಗೆ ಹೆಣ್ಣು ಕೇವಲ ಸಂತಾನ ಅಭಿವೃದ್ಧಿಯ ಯಂತ್ರವಾಗಿರುವಳು. ಈ ರೀತಿಯಾಗಿ ಗಂಡು ಹೆಣ್ಣನ್ನು ನೋಡಿದ ಬಗೆ ಇದಾಗಿದೆ. ಈ ಕಾರಣದಿಂದಾಗಿ ಹೆಣ್ಣು ಆಕೆಯದೇ ಆದ ಬೌದ್ಧಿಕ ಜೀವನ ಸಾಧ್ಯ ಎಂಬುದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದರು. ಅವಳು ಶೂದ್ರನಂತೆಯೇ ವೇದ ಅಧ್ಯಯನಕ್ಕೆ ಅನರ್ಹಳು ಎಂದು ಭಾವಿಸಿದ್ದರು. ಇದರ ಜೊತೆಗೆ ಆಕೆಯ ಕಾರ್ಯಕ್ಷೇತ್ರ ಮುಖ್ಯವಾಗಿ ಮನೆಯಾಗಿತ್ತು. ಇನ್ನೂ ಬಿಡಿಸಿ ಹೇಳುವುದಾದರೆ ಅಡಿಗೆ ಮನೆ ಮತ್ತು ಮಲಗುವ ಕೋಣೆಗೆ ಮಾತ್ರ ಹೆಣ್ಣಿನ ಜೀವನ ಮೀಸಲಾಗಿರುವುದು. ಇದರ ಪರಿಣಾಮದಿಂದಾಗಿ ಭಾರತದ ಸಾಂಸ್ಕೃತಿಕ/ಬೌದ್ಧಿಕ ಇತಿಹಾಸದಲ್ಲಿ ಹೆಣ್ಣು ಯಾವ ಪಾತ್ರವನ್ನು

ವಹಿಸಬೇಕಾಗಿತ್ತೋ! ಅದಕ್ಕೆ ಅವಕಾಶವಿಲ್ಲದಂತಾಯಿತು. ಇನ್ನು ವೈದಿಕ ಯುಗದಲ್ಲಿ ಕೆಲವು ಸ್ತ್ರೀ ದಾರ್ಶನಿಕರ ಹೆಸರು ಮಾತ್ರ ದೊರಕುವುದನ್ನು ಕಾಣಬಹುದು. ಅದಾದ ಮೇಲೆ ಬಂದ ಭಾರತದ ಸಕಲ ಇತಿಹಾಸವು ಗಂಡಸರದ್ದೇ ಪ್ರಧಾನ ಆಗಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ನೋಡುವುದಾದರೆ ಆಡಳಿತಗಾರರು, ಕವಿಗಳು, ಕಲಾವಿದರು, ವಿಜ್ಞಾನಿಗಳು ಇವರುಗಳೆಲ್ಲರೂ ಪುರುಷರೇ ಪ್ರಧಾನವಾಗಿರುವುದನ್ನು ಕಾಣುವೆವು. ಪುರುಷರೇ ಸ್ತ್ರೀಯರ ಕರ್ತವ್ಯಗಳ ಬಗ್ಗೆ ಕಾನೂನುಗಳನ್ನು ರಚಿಸಿ ಸ್ತ್ರೀ ಸ್ವಾತಂತ್ರ್ಯವನ್ನು ಭದ್ರವಾಗಿ ಕೂಡಿಹಾಕಿ ಬೀಗ ಮುದ್ರೆಯನ್ನು ಹಾಕಿದರು.

ಈ ಹಿನ್ನಲೆಯಲ್ಲಿ ನೋಡಿದಾಗ 12ನೇ ಶತಮಾನದ ವಚನಕಾರರ ಆಲೋಚನೆ ಅತ್ಯಂತ ಆಧುನಿಕವೂ ದೂರ ದೃಷ್ಟಿಯಿಂದ ಕೂಡಿದೆ. ಶಿವಶರಣರ ವಚನಗಳು ಕನ್ನಡ ಸಾಹಿತ್ಯ ಪರಂಪರೆಗೆ ವಿನೂತನ ಕೊಡುಗೆಯನ್ನು ನೀಡಿವೆ. ಅವರ ವಚನಗಳು ಕಾಮಧೇನು, ಕಲ್ಪವೃಕ್ಷವಿದ್ದ ಹಾಗೆ. ಅವು ಸಮಾಜಕ್ಕೆ ಬೇಕಾದುದನ್ನು ಕೊಡುವ ಶಕ್ತಿ ಸಾಮರ್ಥ್ಯವನ್ನು ಹೊಂದಿವೆ. 'ವಚನ' ಎಂಬ ಪದವೇ ಅರ್ಥಪೂರ್ಣವಾದದ್ದು. ವಚನ ಎಂದರೆ ಅದೊಂದು ಸಾಹಿತ್ಯ ಪ್ರಕಾರವಷ್ಟೇ ಅಲ್ಲ. ವಚನ ಎಂದರೆ ಭಾಷೆ, ಆಣೆ, ಪ್ರಮಾಣ ಎಂದೂ ಕರೆಯುವುದು ವಾಡಿಕೆ ಇದೆ. ವಚನ ಕೊಡುವುದು ಎಂದರೆ ಕೊಟ್ಟ ಮಾತಿನಂತೆ ನಡೆಯುವುದು. ಹಾಗಾಗಿ ಪ್ರಸ್ತುತ ಸಮಾಜದಲ್ಲಿ ವಚನಗಳಿಗೆ ಎಲ್ಲಿಲ್ಲದ ಮನ್ನಣೆ ಇರುವುದು ಗಮನಿಸಬಹುದು.

ಈ 12ನೇ ಶತಮಾನವು ಭಕ್ತಿಯ ಚೌಕಟ್ಟಿನಲ್ಲಿ ವೈಚಾರಿಕತೆಯನ್ನು ಇರಿಸಿಕೊಂಡ ಕ್ರಾಂತಿ. ಇದು ಹೆಣ್ಣಿನ ಸುತ್ತಲಿದ್ದ ಅಹಿತಕರ ವಾತಾವರಣವು ರೂಪಿಸಿದ್ದ ಹೆಣ್ಣಿನ ಸ್ವರೂಪ ಕಾಯಕ ಹಾಗೂ ವೃತ್ತಿ ಪರಿಭಾಷೆಗೆ ನೀಡಿದ ಪ್ರತಿಕ್ರಿಯೆಯಲ್ಲಿನ ಪ್ರತಿರೋಧದ ನೆಲೆಗಳನ್ನು ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಕೌಟುಂಬಿಕ ರಚನೆಗಳಲ್ಲಿ ಕಾಣಬಹುದಾಗಿದೆ. ಇವರು ಯಾವುದೇ ವಿಚಾರದಲ್ಲೂ ಅಂತರಂಗ ಬಹಿರಂಗ ನೇರ ನಡೆನುಡಿಗಳಲ್ಲಿ ಇಬ್ಬಂದಿತನವನ್ನು ತೋರಲಿಲ್ಲ. ಇದ್ದದನ್ನು ಇದ್ದ ಹಾಗೆ ಹೇಳುವ ಸತ್ಯವನ್ನು ಒಪ್ಪಿಕೊಳ್ಳುವ, ಮೌಢ್ಯವನ್ನು ಖಂಡಿಸುವ ಪ್ರಾಮಾಣಿಕ ಬದುಕಿನ ಕಾಳಜಿ ಮಹಿಳಾ ವಚನಕಾರ್ತಿಯರಲ್ಲಿ ನೈಜವಾಗಿತ್ತು. ಈ ಶತಮಾನದಲ್ಲಿ ಪುರುಷರಿಗಿಂತಲೂ ಮಹಿಳೆಯರ ಸಾಧನೆ ಕಡಿಮೆಯಾಗಿರಲಿಲ್ಲ ಎನ್ನುವುದಕ್ಕೆ ಹಲವು ಶಿವ ಶರಣೆಯರ ನಿದರ್ಶನ ಕಣ್ಣುಮುಂದಿದೆ. ಅಂಥವರಲ್ಲಿ ಮುಕ್ತಾಯಕ್ಕ ಒಬ್ಬಳು. ಮುಕ್ತಾಯಕ್ಕ ಅಪರೂಪದ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡ ದಿಟ್ಟ ಮಹಿಳೆ. ಮುಕ್ತಾಯಕ್ಕ ಎನ್ನುತ್ತಲೇ ತಕ್ಷಣ ನೆನಪಿಗೆ ಬರುವುದು ಅಜಗಣ್ಣನ ಹೆಸರು. ಅಜಗಣ್ಣ ಮುಕ್ತಾಯಕ್ಕನ ಸಹೋದರ. ಶಿವಾನುಭವಿ. ಗುಪ್ತ ಸಾಧಕ. ಆಡಂಬರದ ವ್ಯಕ್ತಿತ್ವದವನಾಗಿರಲಿಲ್ಲ. ಅವರೆಂದೂ ತಾನೊಬ್ಬ ಭಕ್ತ, ಸಾಧಕ, ಅನುಭವಿ ಎಂದು ಹೇಳಿಕೊಂಡವರಲ್ಲ. 'ಎಲೆ ಮರೆಯ ಕಾಯಿ'ಯಂತೆ ಬಾಳಿದವರು. ಇಂಥಹ

ಅಜಗಣ್ಣನ ಪ್ರಭಾವ ಮುಕ್ತಾಯಕ್ಕನ ವಚನಗಳಲ್ಲಿ ಇರುವುದನ್ನು ಕಾಣಬಹುದು. ಮುಕ್ತಾಯಕ್ಕ ತನ್ನ ವಚನಗಳ ಅಂಕಿತವನ್ನು ಅಜಗಣ್ಣ ಎಂದು ಬರೆದು ಕೊಂಡಿದ್ದಾಳೆ.

ವ್ಯಕ್ತಿತ್ವದ ವಿಕಾಸಕ್ಕೆ ದೇಹ, ಮನಸ್ಸು ಇಂದ್ರಿಯಗಳೆಲ್ಲವೂ ಬೇಕೇ ಬೇಕು. ಅವುಗಳ ಬಳಕೆಯಿಂದಲೇ ಬೆಳಕಿನ ಕಡೆ ಸಾಗುವ ಸಂಕಲ್ಪ ನಮ್ಮದಾಗಬೇಕು. ಇಂದ್ರಿಯಗಳೇ ಇಲ್ಲದಿದ್ದರೆ ನಾವು ಯಾವ ಸಾಧನೆಯನ್ನು ಮಾಡಲು ಸಾಧ್ಯವಾಗದು. ಸುಖ ಸಂತೋಷ ಅನುಭವಿಸಬೇಕು. ಆನಂದದಿಂದ ಜೀವನ ಸಾಗಿಸಬೇಕು, ಲಿಂಗಾಂಗ ಸಾಮರಸ್ಯ ಪಡೆಯಬೇಕು ಎಂದರೆ ದೇಹ ಮತ್ತು ಮನಸ್ಸುಗಳೆರಡು ಬೇಕು. ಅವುಗಳಿಗೆ ಸಂಸ್ಕಾರ ಕೊಡಬೇಕು. ಆಗ ಮಾತ್ರ ನಮ್ಮ ದೇಹ ಮತ್ತು ಮನಸ್ಸು ನಿಯಂತ್ರಣದಲ್ಲಿ ಇರುವುದಕ್ಕೆ ಸಾಧ್ಯವಾಗುವುದು. ಮುಕ್ತಾಯಕ್ಕ ಈ ಲೋಕದ ಜನರ ಬದುಕಿನ ವಿಧಾನವನ್ನು ಬಹು ಹತ್ತಿರದಿಂದ ನೋಡಿದವಳು. ಅನೇಕ ಜನರು ವ್ಯರ್ಥವಾಗಿ ಕಾಲಹರಣ ಮಾಡುವುದನ್ನು ಕಂಡು ನೊಂದವಳು. ಕಾಯಕ ಇಲ್ಲ. ಪೂಜೆಯೂ ಇಲ್ಲ. ಸತ್ಸಂಗವೂ ಇಲ್ಲ. ದುರ್ವಿಚಾರ, ದುಸ್ಸಂಗ, ದುರಭ್ಯಾಸ ಹಾಳು ಹರಟೆಯಲ್ಲಿ ಕಾಲಹರಣ ಮಾಡುವ ಜನರು ಇಂದಿಗೂ ಬೇಕಾದಷ್ಟು ಇದ್ದಾರೆ. ಅಂಥವರು ಯಾವ ಸತ್ಕಾರ್ಯ ಸಾಧನೆಯನ್ನು ಮಾಡದೆ ಹೀನ ಬಾಳ್ವೆಯನ್ನು ಸಾಗಿಸುವರು. ಅಂಥವರನ್ನು ಕುರಿತು ಹೇಳುವಂತಹ ವಚನ ಈ ರೀತಿಯಾಗಿದೆ.

**ಸುಮ್ಮನೇಕೆ ದಿನಕಳೆವಿರಿ, ಸುಮ್ಮನೇಕೆ ಹೊತ್ತುಗಳೆವಿರಿ?**
**ಸುಮ್ಮನೇಕೆ ಹೊತ್ತುಗಳೆವಿರಿ ಸ್ವಾಮಿಗಳಿರಾ?**
**ಮಾಡಬನ್ನಿ ದಿನಾ ಶಿವರಾತ್ರಿಯ, ಕೇಳಬನ್ನಿ ಶಿವಾನುಭವವ**
**ನೋಡ ಬನ್ನಿ ಅಜಗಣ್ಣನಿರವ ಬಸವಣ್ಣ ತಂದೆ**

ಜನಸಾಮಾನ್ಯರಿಗೆ ಯಾಕೆ ಸುಖಾಸುಮ್ಮನೆ ಕಾಲಹರಣವನ್ನು ಮಾಡಿ ಸಮಯವನ್ನು ವ್ಯರ್ಥ ಮಾಡುತ್ತೀರಾ! ನಿಮ್ಮ ಮನಸ್ಸನ್ನು ಶಿವನ ಸ್ಮರಣೆಯ ಕಡೆಗೆ ನೀಡಿರಿ. ಸುಖಾಸುಮ್ಮನೆ ವ್ಯರ್ಥವಾಗಿ ದಿನವನ್ನು ಕಳೆಯಬೇಡಿರಿ. ಅಮೂಲ್ಯವಾದ ಸಮಯವನ್ನು ಹಾಳು ಮಾಡಬೇಡಿರಿ. ನಿತ್ಯವೂ ಶಿವನ ಧ್ಯಾನವನ್ನು ಮಾಡುವುದರ ಮುಖಾಂತರವಾಗಿ ನಿಮ್ಮ ಆತ್ಮವನ್ನು ಶುದ್ಧಿಗೊಳಿಸಿಕೊಳ್ಳಿರಿ ಎಂದು ಸೂಚಿಸುವಳು.

ಜನರಿಗೆ ಶಿವರಾತ್ರಿ ಎಂದರೆ ಏನೆಂದು ಗೊತ್ತು. ಎಲ್ಲರೂ ಶಿವನ ಆಚರಣೆಯನ್ನು ಮಾಡುವವರೇ. ಆದರೆ ಶರಣರ ಶಿವರಾತ್ರಿಗೂ ಜನಸಾಮಾನ್ಯರ ಶಿವರಾತ್ರಿಗೂ ಹೋಲಿಕೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ನಾವುಗಳು ವರ್ಷಕ್ಕೊಮ್ಮೆ ನಿಗದಿಯಾದ ದಿನದಂದು ಶಿವರಾತ್ರಿ ಎಂದು ತಿಳಿದು ಅಂದು ಉಪವಾಸವನ್ನು ಮಾಡುವುದು, ಭಜನೆ ಮಾಡುವುದು, ಪೂಜೆ ಮಾಡುವುದು, ಧ್ಯಾನ ಮಾಡುವುದು ಪುರಾಣ ಪುಣ್ಯ ಕಥೆ ಕೇಳುವುದು ಸಹಜ. ಆದರೆ ಮುಕ್ತಾಯಕ್ಕನ ಪ್ರಕಾರ ಪ್ರತಿದಿನವೂ ಶಿವರಾತ್ರಿ ಆಗಬೇಕು. ನಿತ್ಯವೂ ನಮ್ಮ ಮನಸ್ಸು ಶಿವನ

ಭಜನೆ ಮಾಡಬೇಕು. ಶಿವಾನುಭವವನ್ನು ಕೇಳಬೇಕು. ಶರಣರ ಪ್ರಕಾರ ಸ್ನಾನ, ಧ್ಯಾನ ಉಪವಾಸ ಮಾಡುವುದರಿಂದ ಶಿವರಾತ್ರಿ ಆಗುವುದಿಲ್ಲ. ಉಸಿರಾಟದ ಪ್ರತಿ ಹಂತದಲ್ಲಿಯೂ ಶಿವಸ್ಮರಣೆ ಉಸಿರಿನಷ್ಟೆ ಸಹಜ ಕ್ರಿಯೆ ಆಗಬೇಕು. ನಿತ್ಯ ನಾವು ಮಾಡುವ ಕೆಲಸದಲ್ಲಿ ಶಿವನ ಸ್ಮರಣೆ ನಡೆದರೆ ಅದೇ ನಿಜವಾದ ಶಿವರಾತ್ರಿ ಆಗುವುದು. ತನ್ನ ಸಹೋದರ ಅಜಗಣ್ಣನ ರೀತಿ ಶಿವರಾತ್ರಿಯನ್ನು ಜನಸಾಮಾನ್ಯರೂ ಆಚರಣೆ ಮಾಡುವಂತರಾಗಬೇಕು ಎಂದು ಮುಕ್ತಾಯಕ್ಕ ಬಯಸುತ್ತಾಳೆ.

ಅಜಗಣ್ಣನವರು ಮಾಡುವ ಕೆಲಸವನ್ನು ಬಿಟ್ಟು ಶಿವ ಪೂಜೆಯನ್ನು ಮಾಡುತ್ತಾ ಕುಳಿತವರಲ್ಲ. ಲೋಕದಲ್ಲಿದ್ದೂ ಲೋಕಕ್ಕೆ ಹೊರತಾದ ಅನುಭವವನ್ನು ಪಡೆದವರು. ನಾನು ಅನುಭವ ಪಡೆದೆ ಎಂದು ತೋರಿಸಿ ಕೊಂಡವರಲ್ಲ. ತಾವಾಯಿತು ತಮ್ಮ ಕೆಲಸವಾಯಿತು ಎಂಬಂತೆ ಇದ್ದವರು. ಒಂದರ್ಥದಲ್ಲಿ ಅವರದು ಗುಪ್ತ ಭಕ್ತಿ. ಎಂದೂ ಪ್ರಕಟಿಸಿದವರಲ್ಲ. ಅವರ ತಂಗಿ ಮುಕ್ತಾಯಕ್ಕ ತನ್ನ ಅಣ್ಣನ ಮೌನ ಸಾಧನೆಗೆ ಮಾರು ಹೋದವಳು. ಭಕ್ತ ಇದ್ದರೆ ತನ್ನ ಅಣ್ಣನಂತೆ ಇರಬೇಕು ಎನ್ನುವ ಭಾವನೆ ಬೆಳೆಸಿಕೊಂಡವಳು. ಜನಸಾಮಾನ್ಯರೂ ಅಜಗಣ್ಣನವರ ರೀತಿ ಜೀವನವನ್ನು ಸಾಗಿಸಿದಾಗ ಪ್ರತಿ ಕ್ಷಣವೂ ಶಿವರಾತ್ರಿ ಆಗುವುದು. ಆಗ ಯಾವುದೋ ಒಂದು ದಿನವನ್ನು ಶಿವರಾತ್ರಿಯೆಂದು ಅದಕ್ಕೆ ವಿಶೇಷವಾದ ಯಾವ ಆಚರಣೆಗಳನ್ನು ಮಾಡಬೇಕಾಗಿಲ್ಲ. ಒಬ್ಬ ವ್ಯವಸಾಯವನ್ನು ಮಾಡಬಹುದು, ವ್ಯಾಪಾರ ಮಾಡಬಹುದು, ಕೂಲಿ ಮಾಡಬಹುದು, ಕ್ಷೌರಿಕನೋ, ಉಪಾಧ್ಯಾಯನೋ, ಯಾವ ಉದ್ಯೋಗದಲ್ಲಿದ್ದರೂ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಕಾಯಕ ಎಂದು ಭಾವಿಸಿ ನಿಷ್ಠೆಯಿಂದ ದೇಹ ಮತ್ತು ಆತ್ಮ ಶಿವನ ಧ್ಯಾನ ಮಾಡಿದರೆ ಅದೇ ಶಿವರಾತ್ರಿ. ಮಾಡಬೇಕಾಗಿದ್ದ ಕೆಲಸ ಕಾರ್ಯಗಳಲ್ಲಿ ವಂಚನೆ ಮಾಡಿ ವರ್ಷಕ್ಕೊಂದು ದಿನ ಉಪವಾಸವಿದ್ದು ಸ್ನಾನ, ಪೂಜೆ, ಪ್ರವಚನ ಇತ್ಯಾದಿ ಧಾರ್ಮಿಕ ವಿಧಿ ವಿಧಾನಗಳಲ್ಲಿ ತೋರಿಸಿಕೊಂಡರೆ ಖಂಡಿತ ಅದು ಶಿವರಾತ್ರಿ ಆಗುವುದಿಲ್ಲ ಎಂದು ಈ ವಚನದ ಮುಖಾಂತರವಾಗಿ ತಿಳಿಸುತ್ತಾಳೆ.

ಶರಣರು ಸಾಕ್ಷಾತ್ ಶಿವನ ಸ್ವರೂಪದವರು. ಎಲ್ಲೆಲ್ಲೂ ಶಿವನ ದರ್ಶನವನ್ನು ಕಾಣಬಲ್ಲರು. ಸೃಷ್ಟಿ, ಸ್ಥಿತಿ, ಲಯ, ನಿಗ್ರಹ, ಅನುಗ್ರಹಗಳೆಂಬವುಗಳು. ಪರಶಿವನ ಸ್ವರೂಪಿಗಳಾದ ಆರಾಧಕರಿಗೆ ಶಿವನೇ ಭಕ್ತರ ರಕ್ಷಕ. ಅವನನ್ನು ಬಿಟ್ಟು ಮತ್ತೆ ಯಾರೂ ಇಲ್ಲ. ಲಿಂಗ ಪ್ರಸಾದವಾದ ಮೇಲೆ ಗುರುಪ್ರಸಾದವನು ಇಕ್ಕಿಹೆನೆಂಬ ಗುರುದ್ರೋಹಿಗಳ ಏನೆಂಬೆ ಇದು ಕಾರಣ. ಗುರು ಲಿಂಗ ಜಂಗಮ ತತ್ವವು ಅಧ್ಯಾತ್ಮಿಕ ಸೀಮೆಯ ಸಾಮಾಜಿಕ ರಕ್ಷಣೆಯಾಗಿ ಕಂಡಿತು. ಹೀಗಾಗಿ ಶಿವ ಶರಣರು ಆಧ್ಯಾತ್ಮಿಕ ಸಂಕಲ್ಪದ ಸಾಮಾಜಿಕ ರೂಪವನ್ನು ಆಂತರಿಕವಾಗಿಸಿದರು.

**ಅಲರೊಳಗಡಗಿದ ಪರಿಮಳದಂತೆ**
**ಪತಂಗದೊಳಡಗಿದ ಅಗ್ನಿಯಂತೆ**

**ಶಶಿಯೊಳಡಗಿದ ಷೋಡಶ ಕಳೆಯಂತೆ**
**ಉಲುಹಡಗಿದ ವಾಯುವಿನಂತೆ**
**ಸಿಡಿಲೊಳಡಗಿದ ಗಾತ್ರದ ತೇಜದಂತಿರಬೇಕಯ್ಯಾ**
**ಅಜಗಣ್ಣ ತಂದೆ**

ಯೋಗದಲ್ಲಿ ದೇಹವನ್ನು ವಜ್ರಕಾಯವಾಗಿಸಿಕೊಳ್ಳುವುದು ಸಾಧಕರ ಸಾಧನೆ. ಕಾಯಕ್ಕೆ ಬಲಿಷ್ಠತೆ ಬರಬೇಕಾದರೆ ದೇಹದಂಡನೆಯ ಕಠಿಣ ವ್ರತ ಮಾಡಬೇಕಾಗುತ್ತದೆ. ಸಂಸಾರ ವ್ಯಾಮೋಹದ ಹಂಗು ಬಿಡಬೇಕಾಗುತ್ತದೆ. ಶರೀರದ ರಹಸ್ಯದ ಬೆನ್ನು ಹತ್ತಿದವನಿಗೆ ವಿರಕ್ತಿ, ನಿರಾಕರಣೆ ದೇಹಕ್ಕೆ ಪ್ರಖರತೆ ಕೊಡುವ ರೂಪಗಳಾಗಿವೆ. ಯೋಗದಲ್ಲಿ ಪರಮ ಶ್ರೇಷ್ಠತೆಯನ್ನು ಕಾಣಬೇಕಾದರೆ ಮೇಲಿನ ಬೆಡಗಿನ ವಚನದ ಮೂಲಾರ್ಥವನ್ನು ಅರಿಯಬೇಕು. ಅದು ಏನೆಂದರೆ ಪತಂಗವೆಂದರೆ ಇಲ್ಲಿ ಬೆಂಕಿ ಎಂದು ಅರ್ಥ ಮಾಡಿಕೊಳ್ಳಬೇಕು. ಶರಣರೊಡನೆ ಸರಸಮಾಡುವುದು ಸಲ್ಲದು. ಶಿವಶರಣ ಜೊತೆಗೆ ಅನಗತ್ಯವಾದ ಸಲ್ಲಾಪವನ್ನು ಮಾಡಬಾರದು. ಒಂದು ವೇಳೆ ಸರಸವಾಡಿದರೆ ನಾವು ಸುಟ್ಟು ಬೂದಿಯಾಗಿ ಬಿಡುತ್ತೇವೆ ಎಂದಿದ್ದಾರೆ. ಪತಂಗದ ರೀತಿ ನಾವು ಆಸೆಗಳಿಗೆ ಬಲಿಯಾಗಿ ನಮ್ಮನ್ನು ನಾವು ಸುಟ್ಟುಕೊಳ್ಳಬಾರದು ಎಂದು ಕರೆ ನೀಡುವರು. ಸಾಧಕನು ತನ್ನ ಅಂತರಂಗದ ಅಜ್ಞಾನವನ್ನು ಕಳಚಿದಾಗ ಮಾತ್ರ ಪರಿಶುಭ್ರವಾದ ಹುಣ್ಣಿಮೆ ಚಂದ್ರನ ಷೋಡಶ ಕಳೆಯ ರೀತಿಯಾಗಿ ಅವರು ಹೊಳೆಯುವರು. ಸಾಧಕನು ನಮ್ಮ ಹತ್ತಿರವಿದ್ದರೂ ನಮಗೆ ಕಾಣಿಸುವುದಿಲ್ಲ. ಅವರ ಹತ್ತಿರದ ಬಾಂಧವ್ಯವನ್ನು ಮಾಡಿದಾಗ ಮಾತ್ರ ಅವರ ಸಾಧನೆಯ ಅರಿವು ನಮಗೆ ಗೊತ್ತಾಗುವುದು. ಆಗ ನಿಜವಾದ ಸಾಧಕನಿಗೆ ಅವರ ಅಂತರಂಗದಲ್ಲಿ ಶಿವೋಹಂ ಎಂಬ ಪ್ರಣವ ತೇಜಃಪುಂಜ ಪ್ರತಿಧ್ವನಿಸುತ್ತದೆ. ಜನಸಾಮಾನ್ಯರೂ ಸಾಧಕರ (ಅಜಗಣ್ಣ ) ರೀತಿ ತಮ್ಮ ದೇಹವನ್ನು ದಂಡನೆ ಮಾಡಿದಾಗ ಶಶಿಯಲ್ಲಿ ಅಡಗಿರುವ ತೇಜಃಪುಂಜದಂತೆ ಶೋಭಿಸುವರು. ಈ ವಚನವನ್ನು ಓದುತ್ತಿದ್ದರೆ ಡಿವಿಜಿ ಅವರ 'ಮೊದಲು ನಿನ್ನ ತುಟಿಗಳನ್ನು ಒಲಿ' ಎಂಬ ಮಾತು ನೆನಪಿಗೆ ಬರುವುದು. ಅಂದರೆ ಸಾಧಕರು ಮಾತಿಗಿಂತ ಮೌನದಲ್ಲಿ ಹೆಚ್ಚಿನ ಸಾಧನೆ ಅಡಗಿರುವುದನ್ನು ಗಮನಿಸಬಹುದಾಗಿದೆ. ಹೀಗೆ ಈ ವಚನದಲ್ಲಿ ಅಡಗಿರುವ ರೂಪಕ ಶಕ್ತಿ ಮುಕ್ತಾಯಕ್ಕನ ಆಧ್ಯಾತ್ಮಿಕ ಅರಿವಿನ ಸಂಕಲ್ಪವೆಂದು ಸ್ಪಷ್ಟಪಡಿಸಬಹುದು.

**ರವಿಯೊಳಗಡಗಿದ ಪ್ರತಿಬಿಂಬದಂತೆ**
**ಹಿಡಿವರಿಗಳಲ್ಲದಿರಬೇಕು ಅಣ್ಣಾ**
**ನಿನ್ನೊಳು ಅಡಗಿದ ಭೇದವ ಭಿನ್ನವ ಮಾಡುವರೆ ಅಣ್ಣಾ**
**ನಿನ್ನ ನುಡಿಯೆಲ್ಲ ಪ್ರತಿಬಿಂಬಗಳಾದವೆ ಅಣ್ಣ**
**ಕೊಡನೊಳಗಣ ಜ್ಯೋತಿಯ**
**ಅಡಗಿಸಲರಿಯದದೆಮಗೆ**
**ಏರಿದಂತಾದೆಯೋ ಅಜಗಣ್ಣ**

ಮುಕ್ತಾಯಕ್ಕ ಅಜಗಣ್ಣನನ್ನು ಗುರು ಎಂದು ನಂಬಿದಾಕೆ. ಅವನ ವಿಶಿಷ್ಟ ಜ್ಞಾನ ಮತ್ತು ವ್ಯಕ್ತಿತ್ವವನ್ನು ಗೌರವಿಸಿದಾಕೆ. ಈ ವಚನದಲ್ಲಿ ಅಣ್ಣ ತಂಗಿಯರ ತಾತ್ವಿಕ ಅನುಭಾವದ ಸಂವಾದಗಳು ಅಭಿವ್ಯಕ್ತಿ ಗೊಂಡಿರುವುದನ್ನು ಕಾಣಬಹುದು. ಅಣ್ಣನ ವ್ಯಕ್ತಿತ್ವವನ್ನು ರವಿಯ ಒಳಗೆ ಅಡಗಿರುವ ಚಿತ್ ಪ್ರಭೆಗೆ ಮುಕ್ತಾಯಕ್ಕ ಹೋಲಿಸಿ ಇದು ಘನಲಿಂಗ ಮಹಿಮೆಯೆಂದು ಕೊಂಡಾಡಿದ್ದಾಳೆ. ರವಿಯೊಳಡಗಿದ ಪ್ರತಿಬಿಂಬ ಎನ್ನುವಲ್ಲಿ ಬರೀ ರವಿಯಲ್ಲ. ಪ್ರಕಾಶಮಾನವಾದ ಜ್ಞಾನವಂತ ತನ್ನ ಅಣ್ಣ ಅಜಗಣ್ಣನಾಗಿದ್ದಾನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ. ಈ ಮೂಲಕವಾಗಿ ಅಜಗಣ್ಣನ ಜ್ಞಾನವನ್ನು ಅದ್ವೈತದ ನೆಲೆಯಲ್ಲಿ ಕಾಣುವಳು. ಅವಳ ಮೇಲಿನ ವಚನದ ಮಾತುಗಳು ನಿನ್ನ ನುಡಿಗಳು ಕೊಡದೊಳಗಿನ ಪ್ರತಿಬಿಂಬದಂತೆ ಎನ್ನುವ ಸ್ಥೂಲರೂಪವು ಮುಕ್ತಾಯಕ್ಕನ ಭಾವರೂಪವೂ ಆಗಿದೆ ಎಂದರೆ ತಪ್ಪಿಲ್ಲ. ಅಜಗಣ್ಣನ ದಾರ್ಶನಿಕತೆಯನ್ನು ತುಂಬಿದ ಕೊಡದ ಜ್ಞಾನ ಜ್ಯೋತಿಗೆ ಹೋಲಿಕೆಯನ್ನು ಮಾಡಿರುವುದು ಅರ್ಥಪೂರ್ಣವಾದುದು. ಈ ಮೂಲಕವಾಗಿ ಗುರು ಶಿಷ್ಯರ ಸಂಬಂಧವನ್ನು ಮುಖಾಮುಖಿಯಾಗಿಸುತ್ತಾಳೆ. ಎಲ್ಲೆಲ್ಲೂ ಆವರಿಸಿರುವ ತನ್ನ ಅಣ್ಣನ ಆಧ್ಯಾತ್ಮಿಕ ಮೌಲ್ಯದ ದರ್ಶನವನ್ನು ಮುಕ್ತಾಯಕ್ಕ ಇಲ್ಲಿನ ವಚನದಲ್ಲಿ ಹೀಗೆ ಗೌರವಿಸುತ್ತಾಳೆ.

ಸಾಧನೆಯ ಆರಾಧನೆಯನ್ನು ಗುರುವಿನಲ್ಲಿ ಕಾಣುವ ಮುಕ್ತಾಯಕ್ಕ ಸಮಷ್ಟಿ ಪ್ರಜ್ಞೆಯನ್ನು ಅಜಗಣ್ಣನ ಅನುಭಾವದ ಪ್ರತಿಮೆಯ ಮೂಲಕವಾಗಿ ಇಲ್ಲಿನ ವಚನದಲ್ಲಿ ಕಾಣುತ್ತಾಳೆ. ತಾಯಿಯಾಗಿ ಜೋಗುಳವಾಡುತ್ತಾ ನಿರಾಕಾರ ಲಿಂಗವನ್ನು ಕಾಣುವ ಅವಳ ಆತ್ಮ ನಿವೇದನೆ ಆಧ್ಯಾತ್ಮಿಕ ರಹಸ್ಯದ ಬೆಡಗಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಅಣ್ಣನ ಸಾವನ್ನು ಕಣ್ಣಾರೆಕಂಡು ತನ್ನ ಅಣ್ಣನಿಗಾಗಿ ಮುಕ್ತಾಯಕ್ಕನ ಮನಸ್ಸಿನ ಆತ್ಮ ನಿವೇದನೆ ಹೀಗಿದೆ;

**ನೀರ ಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ**
**ಬಯಲು ಬೊಂಬೆಯ ಕೈಯಲ್ಲಿ ಕೊಟ್ಟು**
**ಮುದ್ದಾಡಿಸುತ್ತಿರ್ದೆನಯ್ಯಾ**
**ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ**
**ಬೆರಗಾದೆನಯ್ಯ ಇನ್ನು ಅಜಗಣ್ಣನ ಯೋಗಕ್ಕೆ**

ಮುಕ್ತಾಯಕ್ಕನಿಗೆ ಆಧ್ಯಾತ್ಮಿಕ ಪಯಣದಲ್ಲಿ ಅಜಗಣ್ಣ ಎಷ್ಟು ಮುಖ್ಯವೋ ಅವಳ ಮನದಲ್ಲಿ ನೆಲೆಯೂರಿದ ಅಜಗಣ್ಣನ ಆತ್ಮದರ್ಶನದ ಸಾಂಸ್ಥಿಕ ರೂಪವೂ ಅಷ್ಟೇ ಮುಖ್ಯವಾಗಿದೆ. ಹೀಗಾಗಿ ಆಕೆ ಮನವೆಂಬ ನೀರ ಬೊಂಬೆಯಲ್ಲಿ ಶಿವ ಚೈತನ್ಯದ ನಿರಾಕಾರವೆಂಬ ಬಯಲ ಬೊಂಬೆಗೆ ಗೆಜ್ಜೆಯನ್ನು ಕಟ್ಟಿ ಕುಣಿಸುತ್ತಾಳೆ. ಚೈತನ್ಯದ ಬೊಂಬೆಯನ್ನು ಮನಸ್ಸಿನ ಸಿಂಹಾಸನದಲ್ಲಿ ಸ್ಥಾಪಿಸುತ್ತಾಳೆ. ಗೆಜ್ಜೆ, ಗೊಂಬೆ, ನಿರಾಳ ಪದಗಳನ್ನು ಬಳಸುವುದರ ಮೂಲಕ ತನ್ಮಯೀ ಭಾವದ ಆನಂದವನ್ನು ಪಡೆಯುತ್ತಾಳೆ. ಸ್ವಾನುಭಾವವೆಂಬ ಕರ್ಪೂರದ ಪುತ್ಥಳಿ ಮನವೆಂಬ ಬೆಂಕಿಯಲ್ಲಿ ದಹಿಸುವಾಗ

ಸುಜ್ಞಾನದ ಸಿಂಹಾಸನದಲ್ಲಿ ಬೆಳಕಾಗಿ ಪ್ರಕಾಶಿಸಿದೆ. ಮನದ ಅದ್ವೈತದ ಭಕ್ತಿಯಲ್ಲಿ ಆಕೆಗೆ ಬೆಡಗಾಗಿದೆ. ಮುಕ್ತಾಯಕ್ಕನ ಈ ವಚನ ಸಂವೇದನೆ ತತ್ವಾನುಭೂತಿಯನ್ನು ಕೊಡುವುದರ ಜೊತೆಗೆ ಗುರುವಾದ ಅಜಗಣ್ಣನನ್ನು ವ್ಯಕ್ತಿ ವಿಶಿಷ್ಟ ಸಾಧಕನಂತೆ ಪರಿಚಯಿಸಿ ಬೆರಗು ಕೊಡುತ್ತಾಳೆ. ಬೆರಗಾದೆನಯ್ಯಾ ಅಜಗಣ್ಣ ನಿನ್ನ ಯೋಗಕ್ಕೆ ನಿರಾಳ ಶಿವ ತತ್ವಕ್ಕೆ ಕರ್ಪೂರದ ಸುವಾಸನೆಯನ್ನು ಕೊಡುವುದು ಆಕೆಯ ಆಳವಾದ ಬೆಡಗಿನ ಲಾಲಿತ್ಯವೆಂದು ಹೇಳಬಹುದು.

"ಮುಕ್ತಾಯಕ್ಕ ಮುಖ್ಯವಾಗಿ ಬುದ್ಧಿಜೀವಿ. ಯಾವುದನ್ನೂ ಪರೀಕ್ಷಿಸದೆ, ಕೆಣಕದೆ, ಪ್ರಶ್ನಿಸದೆ ತನಗೆ ಒಪ್ಪಿಗೆಯಾಗದೆ ಅಂಗೀಕರಿಸುವವಳಲ್ಲ. ಅವಳು ಮಾತನಾಡುವಾಗ ಅಲ್ಲಮ ದೊಡ್ಡ ಜ್ಞಾನಿ ತಾನು ಸಣ್ಣವಳು, ಹೆಣ್ಣು ಎಂಬ ಯಾವುದೇ ಅಳುಕು ಇಲ್ಲ. ಅಲ್ಲಮನನ್ನು ಎಲ್ಲ ವಚನಕಾರರು ಗುರು ಸ್ಥಾನದಲ್ಲಿಟ್ಟು ಗೌರವಿಸಿದ್ದಾರೆ. ಆದರೆ ಅವನ ಯೋಗ್ಯತೆಯನ್ನೇ ಶಂಕಿಸಿ ಅವನನ್ನು ಕಡು ಪರೀಕ್ಷೆಗೆ ಒಳಗು ಮಾಡಿ ಅನಂತರ ಗುರು ವಾಕ್ಯವೆಂದು ಅವನ ವಾಕ್ಯಗಳನ್ನು ಅಂಗೀಕರಿಸಿದ ವ್ಯಕ್ತಿ ಅಂದರೆ ಬಹುಶಃ ಮುಕ್ತಾಯಕ್ಕ ಒಬ್ಬಳೇ ಎಂದು ಕಾಣಿಸುತ್ತದೆ. ಅಕ್ಕಮಹಾದೇವಿಯ ಭಾವುಕತೆಯಾಗಲಿ ಭಕ್ತಿ ಮಾರ್ಗವಾಗಲಿ ಇಲ್ಲಿಲ್ಲ. ಇವಳದು ಮುಖ್ಯವಾಗಿ ಪ್ರಶ್ನಿಸುವ, ಸವಾಲು ಹಾಕುವ, ಒಪ್ಪಿಕೊಳ್ಳಲು ಸಿದ್ಧವಾಗಿರುವ ಮುಕ್ತ ಮನಸ್ಸು. ಈ ದೃಷ್ಟಿಯಿಂದ ನೋಡಿದಾಗ ಮುಕ್ತಾಯಕ್ಕ ಆಧುನಿಕರ ವೈಚಾರಿಕ ರೀತಿಗೆ ಬಹಳ ಪ್ರಿಯಳಾಗುತ್ತಾಳೆ. ಬೌದ್ಧಿಕ ಪ್ರಖರತೆಯಲ್ಲಿ ಅವಳ ಸಮಕ್ಕೆ ಬರುವ ಮತ್ತೊಬ್ಬ ವಚನಕಾರ್ತಿ ಪ್ರಾಯಶಃ ಸಿಗಲಾರಳು." (ವಚನಸಾಹಿತ್ಯ, ಚಿದಾನಂದ ಮೂರ್ತಿ, ಸಪ್ನ ಬುಕ್ ಹೌಸ್, ಬೆಂಗಳೂರು, ಪು.109) ಹೀಗೆ ಮುಕ್ತಾಯಕ್ಕ ಪ್ರಶ್ನಿಸುವ ಮನೋಭಾವ ಹಾಗೂ ಮುಕ್ತ ಮನಸ್ಸಿನಿಂದ ಸ್ವೀಕರಿಸುವ ವ್ಯಕ್ತಿಯಾಗಿರುವಳು ಎಂದು ಚಿದಾನಂದಮೂರ್ತಿ ಅವರು ಗುರುತಿಸುವರು. ಈ ಮೂಲಕವಾಗಿ ಆಧುನಿಕ ಮಹಿಳೆಯರಿಗೂ ಈಕೆ ಮಾದರಿಯ ಹೆಣ್ಣಾಗಿರುವಳು ಎಂದು ಹೇಳಿದರೆ ತಪ್ಪಾಗಲಾರದು. ಒಟ್ಟಿನಲ್ಲಿ ಆಕೆಯು ತನ್ನ ವಚನಗಳ ಮುಖಾಂತರವಾಗಿ ಜನಸಾಮಾನ್ಯರು ವ್ಯರ್ಥವಾಗಿ ಕಾಲಹರಣವನ್ನು ಮಾಡದೆ ಕಾಯಕ, ದಾಸೋಹ, ಪೂಜೆಯನ್ನು ಅರಿತು ಸಹೋದರ ಅಜಗಣ್ಣನು ನಡೆದ ಹಾದಿಯಲ್ಲಿ ನಡೆದರೆ ನಮ್ಮ ಜೀವನವು ಸಾರ್ಥಕವಾಗುವುದು ಎಂದಿದ್ದಾಳೆ. ಹಾಗೆಯೇ ದೇಹ ಮತ್ತು ಆತ್ಮ ಶಿವಾನುಭವದ ಸವಿಯನ್ನು ಅನುಭವಿಸಿದರೆ ಕಾಲದ ಸದ್ಬಳಕೆಯಾಗಿ ಜನಸಾಮಾನ್ಯರೂ ಅಜಗಣ್ಣನಂತೆ ಅನುಭವಿಯಾಗಲು ಸಾಧ್ಯವಾಗುವುದು ಎನ್ನುವುದು ಈಕೆಯ ವಚನಗಳ ಸಾರವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, (2012), ವಚನ ವೈಭವ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಚಿದಾನಂದ ಮೂರ್ತಿ ಎಂ., (2015), ವಚನ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.
3. ನಾಗಭೂಷಣಸ್ವಾಮಿ ಓ.ಎಲ್., (2015), ವಚನ ಸಾವಿರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.